# ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಸಕಲೇಶಪುರ.

## ಸಿಸಿ: 327/2022

ಪಿರ್ಯಾದುದಾರರು ಃ ಶ್ರೀ ಉದಯ ಕೆ.ಜೆ.

ಬಿನ್ ಎಸ್.ಆರ್. ಜೋಯಪ್ಪ,
48 ವರ್ಷ,
ವಾಸಃ ಕಳಲೆ ಗ್ರಾಮ,
ಯಸಳೂರು ಹೋಬಳಿ,
ಸಕಲೇಶಪುರ ತಾಲ್ಲೂಕು,
ಹಾಸನ ಜಿಲ್ಲೆ.

-ವಿರುದ್ಧ-

ಆರೋಪಿ ಃ ಯಶಸ್ ಹೆಚ್. ಎನ್.
ಬಿನ್ ನಾಗರಾಜ ವಿ.ಎಸ್.,
24 ವರ್ಷ,
ವಾಸಃ ಜವೇನಹಳ್ಳಿ ಮಠದ ಹತ್ತಿರ,
ಲಕ್ಷ್ಮೀಪುರ ಬಡಾವಣೆ,
1 ನೇ ಕ್ರಾಸ್, ಹಾಸನ ಟೌನ್,
ಹಾಸನ ಜಿಲ್ಲೆ.

ದಂಡ ಪ್ರಕ್ರಿಯಾ ಸಂಹಿತೆ **313** ರ ಅಡಿಯಲ್ಲಿ ಆರೋಪಿತನ ಹೇಳಿಕೆ

1. ನೀವು ಫಿರ್ಯಾದುದಾರ ಪರ ಸಾಕ್ಷ್ಯ ನುಡಿದಿರುವುದನ್ನು ಕೇಳಿರುವಿರಾ?

   ಉತ್ತರಃ

2. ಪ್ರಾಸಾ.1/ಶ್ರೀ ಉದಯ ಕೆ.ಜೆ. ರವರು ತಮ್ಮ ಸಾಕ್ಷ್ಯದಲ್ಲಿ ನುಡಿದಿರುವುದೇನೆಂದರೆ, ಆರೋಪಿಯಾದ ನೀವು ಹಾಗೂ ಫಿರ್ಯಾದಿದಾರರು ಪರಿಚಯಸ್ಥರಾಗಿದ್ದು, ಫಿರ್ಯಾದುದಾರರಿಂದ ಪಡೆದುಕೊಂಡಿರುವ ಮುಂಗಡ

ಹಣವಾದ **3,50,000/-** ಗಳನ್ನು ಸದರಿ ಒಪ್ಪಂದದ ಪತ್ರದಲ್ಲಿ ಕಾಣಿಸಿ ನಮೂದು ಮಾಡಿ ಒಪ್ಪಂದ ಪತ್ರವನ್ನು ಬರೆದಿರುತ್ತಾರೆ. ಆರೋಪಿಯು ರೂ. **3,50,000/-** ಗಳನ್ನು ಆರು ತಿಂಗಳಲ್ಲಿ ಕೊಡುವುದಾಗಿ ಒಪ್ಪಿಕೊಂಡು ದಿನಾಂಕ **30.04.2021** ರವರೆಗೆ ಕಾಲಾವಕಾಶವನ್ನು ಪಡೆದುಕೊಂಡಿರುತ್ತಾರೆ. ಆರೋಪಿಯು ಪಿರ್ಯಾದಿಯ ಹೆಸರಿಗೆ ಎರಡು ಚೆಕ್ಕುಗಳನ್ನು ನೀಡಿರುತ್ತಾರೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?
ಉತ್ತರಃ

3. ಪ್ರಾಸಾ.1 ರವರು ಮುಂದುವರೆದು ನುಡಿದಿರುವುದೇನೆಂದರೆ, ಆರೋಪಿಯಾದ ನೀವು ಸದರಿ ವಿಷಯಕ್ಕೆ ಸಂಬಂಧಿಸಿದಂತೆ ರೂ. 3,50,000/- ಗಳನ್ನು ಸಾಲವಾಗಿ ಪಡೆದುಕೊಂಡು, ನಿಮ್ಮ ಖಾತೆ ಹೊಂದಿರುವ ಕಾರ್ಪೊರೇಷನ್ ಬ್ಯಾಂಕ್, ಹಾಸನ ಶಾಖೆಯ ಚೆಕ್ ಸಂಖ್ಯೆಃ 272159 ದಿನಾಂಕ - **05.04.2021** ಹಾಗೂ ಕಾರ್ಪೊರೇಷನ್ ?ಬ್ಯಾಂಕ್, ಸಾಲಗಾಮೆ ರೋಡ್ ಶಾಖೆಯ ಚೆಕ್ ಸಂಖ್ಯೆಃ 272160 ರಲ್ಲಿ ರೂ. 1,75,000/- ಗಳ ದಿನಾಂಕ - **05.04.2021** ನಮೂದಿಸಿದ ಎರಡು ಚೆಕ್ಕನ್ನು ನೀಡಿ ಅವುಗಳನ್ನು ನಗಧೀಕರಿಸಿಕೊಳ್ಳುವಂತೆ ಹೇಳಿರುತ್ತೀರಿ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?
ಉತ್ತರಃ

4. ಪ್ರಾಸಾ.1 ರವರು ಮುಂದುವರೆದು ನುಡಿಯುವುದೇನೆಂದರೆ, ನಂತರ ಪಿರ್ಯಾದುದಾರರು ಆರೋಪಿಯಾದ ನೀವು ಕೊಟ್ಟ ಎರಡು ಚೆಕ್ಕನ್ನು ಅವರು ಖಾತೆ ಹೊಂದಿರುವ ಸಕಲೇಶಪುರ ತಾಲ್ಲೂಕು, ಹೊಸೂರು ಶಾಖೆಯ ಬ್ಯಾಂಕ್ ಆಫ್ ಬರೋಡಾ ಬ್ಯಾಂಕ್‌ಗೆ ದಿನಾಂಕಃ 05.04.2021 ರಂದು ನಗದೀಕರಣಕ್ಕಾಗಿ ಸಲ್ಲಿಸಿದಾಗ, ಬ್ಯಾಂಕಿನವರು "**Payment Stopped by**

**drawer**”ಎಂಬ ಹಿಂಬರದೊಂದಿಗೆ ದಿನಾಂಕಃ 17.04.2021 ರಂದು ಎರಡು ಚೆಕ್ಕನ್ನು ವಾಪಸ್ಸು ನೀಡಿರುತ್ತಾರೆ. ತದನಂತರ ಪಿರ್ಯಾದುದಾರರು ನಿಮಗೆ ವಕೀಲರಿಂದ ತ್ವರಿತ ಹಾಗೂ ನೋಂದಣಿ ಅಂಚೆ ಮೂಲಕ ದಿನಾಂಕಃ 13.05.2021 ರಂದು ಕಾನೂನು ತಿಳುವಳಿಕಾ ಪತ್ರವನ್ನು ದಿನಾಂಕ **24.05.2021** ರಂದು ನೀಡಿರುತ್ತಾರೆ. ಆರೋಪಿಯಾದ ನೀವು ಸದರಿ ನೋಟೀಸನ್ನು ಸ್ವೀಕರಿಸಿದ್ದರೂ ಸದರಿ ನೋಟೀಸಿಗೆ ಪ್ರತ್ಯುತ್ತರವನ್ನು ನೀಡಿರುವುದಿಲ್ಲ ಹಾಗೂ ಚೆಕ್ಕಿನ ಯಾವುದೇ ಹಣವನ್ನು ಸಹ ಮರುಪಾವತಿ ಮಾಡಿರುವುದಿಲ್ಲ. ಆದಕಾರಣ ನೀವು ಕಲಂ.138 ಎನ್.ಐ ಆಕ್ಟ್ ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತೀರಿ ಎಂದು ನುಡಿದಿರುತ್ತಾರೆ, ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

5. ನಿಮ್ಮ ಪರವಾಗಿ ಬೇರೆ ಏನಾದರೂ ಹೇಳುವುದು ಇದೆಯೋ?
ಉತ್ತರಃ

6. ನಿಮ್ಮ ಪರವಾಗಿ ಯಾವುದಾದರೂ ಸಾಕ್ಷಿ ಇದೆಯೇ?
ಉತ್ತರಃ

(ಮೇಲಿನ ಆರೋಪಿತನ ಹೇಳಿಕೆಯನ್ನು ಓದಿ ಹೇಳಿ, ಆತನು ನೀಡಿದ ಉತ್ತರವನ್ನು ದಾಖಲಿಸಿಕೊಳ್ಳಲಾಯಿತು. ಅದು ನಿಜ ಮತ್ತು ಸರಿಯಾಗಿದೆ ಎಂಬುದಾಗಿ ಈ ಮೂಲಕ ದೃಢೀಕರಿಸುತ್ತೇನೆ.)

ದಿನಾಂಕಃ 19.07.2024

ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ.
ಸಕಲೇಶಪುರ